ಪಡೆಯಲಾಗಿದೆ ಹಾಗೂ ಮಳಿಗೆಯ ಶೇಕಡ 99 ಮೌಲ್ಯದ ಬಾಬ್ತು ರೂ. 1,12,000-00 ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರಿಂದ ಹಂಚಿಕೆದಾರರ ಪರವಾಗಿ ಸಂದಾಯವಾಗಿರುತ್ತದೆ. ಮಳಿಗೆಯ ಪೂರ್ಣ ಮೌಲ್ಯದ ಪಾವತಿಗಾಗಿ ಇನ್ನೂ ರೂ. 19,371-00 ಮತ್ತು ತಗಲುವ ಬಡ್ಡಿ, ಬಾಕಿ ಸಂದಾಯವಾಗಬೇಕಾಗಿದೆ.

ಈ) ಇದಕ್ಕೆ (ಅ)ರಲ್ಲಿ ಉತ್ತರ ನೀಡಲಾಗಿದೆ.

ಉ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ಘಟಕದ ಬೀಗಮುದ್ರೆಯನ್ನು ದಿನಾಂಕ 13-3-95ರಲ್ಲಿ ಮಾಡಿ ಹರಾಜಿಗೆ ಪ್ರಕಟಣೆ ನೀಡಿರುತ್ತಾರೆ.

ಮಾಗಡಿ ತಾಲ್ಲೂಕಿನ ಅವ್ವೇರ ಹಳ್ಳಿಯಲ್ಲಿ ಕೈಗಾರಿಕಾ ಸ್ಥಾಪನೆ

2943 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಮಾಡಬಾಳ್ ಹೋಬಳಿ ಅವ್ವೇರಹಳ್ಳಿ ಸರ್ವೆ ನಂ. 15ರಲ್ಲಿ 50 ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಮೆ: ಬಿಗ್‌ಬಾಸ್ ಕಂಪನಿಗೆ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಈ ಪ್ರದೇಶದ ವ್ಯಾಪ್ತಿಯಲ್ಲಿನ ಮಂಚನಬೆಲೆ ಜಲಾಶಯದಿಂದ ಮಾಗಡಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿರುವುದರಿಂದ ಕೈಗಾರಿಕೆ ಸ್ಥಾಪಿಸಿದರೆ ಕುಡಿಯುವ ನೀರು ಕಲುಷಿತಗೊಂಡು ಪರಿಸರ ಮಾಲಿನ್ಯವಾಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ?

ಇ) ಇಲ್ಲಿ ಕೈಗಾರಿಕೆಗಳು ಸ್ಥಾಪಿಸಿದರೆ ಈ ಭಾಗದ ಹಲವಾರು ರೈತರು ಜಮೀನು ಕಳೆದುಕೊಂಡು ನಿರ್ಗತಿಕರಾಗುವುದಿಲ್ಲವೆ, ಸರ್ಕಾರಕ್ಕೆ ಇಲ್ಲಿನ ಸ್ಥಳೀಯ ಜನರ ವ್ಯಾಪಕ ವಿರೋಧ ಹಾಗೂ ಸ್ಥಳೀಯ ರೈತರ ಪ್ರತಿಭಟನೆ, ಅಧಿಕಾರಿಗಳ ಋಣಾತ್ಮಕ ವರದಿಯ ನಡುವೆಯೂ ಸರ್ಕಾರವು ಕೈಗಾರಿಕೆಗಾಗಿ ಬಿಗ್‌ಬಾಸ್‌ಕಂಪನಿಗೆ ಜಮೀನು ಮಂಜೂರು ಮಾಡುವುದೇ?

ಈ) ಈ ಬಗ್ಗೆ ಸರ್ಕಾರದವರ ನಿಲುವೇನು?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಸ್ಥಳೀಯರಿಂದ ಆಕ್ಷೇಪಣೆಗಳು ಬಂದಿರುವುದರಿಂದ, ಸ್ಥಳ ಪರಿಶೀಲನೆ ಮಾಡಿ, ತಕರಾರುಗಳನ್ನು ಪರಿಶೀಲಿಸಲಾಗುವುದು.

ಈ) ಸ್ಥಳ ಪರಿಶೀಲನೆಯ ನಂತರ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು.

Construction of Samudaya Bhavans in Magadi Constituency

Sri. H.C. Balakrishna (Magadi) : will the Minister for Social Welfare be pleased to state.

(a) *How many Community Centre Buildings are constructed in Magadi Assembly Constituency? (Give details);*

(b) *How many Community Centre buildings are proposed to be constructed by the Government?*

c) *How many Television Sets are distributed freely to these community centre buildings, and how Many Television sets are yet to be distributed?*

Sri K.M. Krishna Reddy (Minister for Social Welfare) :

a) There is no programme in Social Welfare Department for construction of Samudaya Bhavans. However Social Welfare Department is implementing a programme of construction of Mini Ambedkar Bhavans one each in all the Assembly Constituences in the State at a cost of Rs, 3.00 lakhs per Bhavan. Under this programme sanction has been accorded vide G.O. No. SWD 400 SEW 94 dated 29-12-95 for construetion of Ambedkar Bhavans at 120 places.

c) There is no programme to provide T.V. Sets under the mini Ambedkar Bhavan Scheme.

ಹಿರೇಕೆರೂರು ತಾಲ್ಲೂಕಿನ ಪ್ರಧಾನ ಮಂತ್ರಿಗಳ ರೋಜಗಾರ ಯೋಜನೆ

2948 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95, 1995-96 ಮತ್ತು 1996-97ನೇ ಸಾಲಿನಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳು ಎಷ್ಟು (ಹೆಸರುಗಳನ್ನು ತಿಳಿಸುವುದು) ?*

ಆ) *ಮೇಲೆ ಕಾಣಿಸಿದ ಪ್ರತಿಯೊಬ್ಬರು ಯಾವ ಉದ್ದೇಶಕ್ಕಾಗಿ ಎಷ್ಟು ಸಾಲ ಕೋರಿದ್ದರು?*